**ದಿನಾಂಕಃ 06-11-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .**

**ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ.ಎನ್.ವಿ.ಸಿ. ವಕೀಲರಿಂದಃ**

2012 ನೇ ಇಸವಿಯಲ್ಲಿ ನನ್ನ ಮದುವೆಯಾಗಿದೆ. ನನ್ನ ಮದುವೆಯಾದ ಸಮಯದಿಂದ ನಾನು ನನ್ನ ಗಂಡನ ಮನೆಯಲ್ಲಿಯೇ ವಾಸವಾಗಿದ್ದೇನೆ ಎಂದರೆ ಸರಿ. ಈ ದಾವೆಯನ್ನು ನಾನು ನನ್ನ ತಂದೆ, ನನ್ನ ಮಲತಾಯಿ ಮತ್ತು ನನ್ನ ಮಲಸಹೋದರರ ವಿರುದ್ಧ ಸಲ್ಲಿಸಿದ್ದೇನೆ. ನನ್ನ ಮದುವೆಗಿಂತ ಪೂರ್ವದಲ್ಲಿ ನಾನು ಯಾವುದೇ ಸಹಿಯನ್ನು ಮಾಡಿರುವುದಿಲ್ಲ. ದಾವಾ ಸ್ವತ್ತು ಅನುಸೂಚಿ-ಬ ರಲ್ಲಿಯ 1 ನೇ ಆಸ್ತಿ ಮುಷ್ಠೂರು ಗ್ರಾಮದ ಸರ್ವೇ ನಂ.67/1 ರ 6 ಎಕರೆ 12 ಗುಂಟೆ ಜಮೀನು ಮೂಲತಃ ನೀಲಪ್ಪ ಹೊಸಮನಿ ರವರ ಮನೆತನಕ್ಕೆ ಸಂಬಂಧಪಟ್ಟ ಆಸ್ತಿಯಾಗಿತ್ತು ಎಂದರೆ ಸರಿಯಲ್ಲ . ಸದರಿ ಆಸ್ತಿಗೆ ಸಂಬಂಧಪಟ್ಟಂತೆ ನೀಲಪ್ಪ ಹೊಸಮನಿ ಮತ್ತು ಅವರ ಅಣ್ಣ-ತಮ್ಮಂದಿರ ಮಧ್ಯ ದಿಃ 08-07-1962 ರಂದು ವಿಭಾಗವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಿಃ 08-07-1962 ರಂದು ವಿಭಾಗವಾದಾಗ

ಸದರಿ ಆಸ್ತಿ ಸದರಿ ನೀಲಪ್ಪ ಹೊಸಮನಿ ರವರ ಮಗನಾದ ನಿಂಗಪ್ಪ ಹೊಸಮನಿ ರವರ ಪಾಲಿಗೆ ಬಂದಿರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಪಾಲುವಿಭಾಗದ ಪ್ರಕಾರ ಮುಷ್ಠೂರ ಗ್ರಾಮದ ಡ(ಎಂ.ಇ)ನಂ.611 ಎಂದು ಆದೇಶವೂ ಸಹ ಆಗಿರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ . ದಿಃ 07-07-1967 ರಂದು ಸದರಿ ನಿಂಗಪ್ಪ ಹೊಸಮನಿ ರವರ ಬಳಿಯಿಂದ ನಾಗಪ್ಪ ಮಲ್ಲಪ್ಪ ರಂಗರೆಡ್ಡಿ ರವರು ಎರಡು ಸಾವಿರ ರೂಪಾಯಿಗಳಿಗೆ ಖರೀದಿ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ನಾಗಪ್ಪ ಮಲ್ಲಪ್ಪ ರಂಗರೆಡ್ಡಿ ರವರು ಸದರಿ ಆಸ್ತಿಯನ್ನು ಖರೀದಿ ಮಾಡಿದ ನಂತರ ಮುಷ್ಠೂರು ಗ್ರಾಮದ ಡ(ಎಂ.ಇ)ನಂ.673 ರ ಆದೇಶ ದಿಃ 02-01-1968 ರಂದು ಆದೇಶ ಆಗಿರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ನಾಗಪ್ಪ ಮಲ್ಲಪ್ಪ ರಂಗರೆಡ್ಡಿ ರವರು ಸದರಿ ಆಸ್ತಿಯನ್ನು ಖರೀದಿ ಮಾಡಿದ ನಂತರ ಸದರಿಯವರ ಹೆಸರು ಸದರಿ ನಾಗಪ್ಪ ಮಲ್ಲಪ್ಪ ರಂಗರೆಡ್ಡಿ ರವರ ಹೆಸರಿಗೆ ದಾಖಲು ಆಗಿರುತ್ತದೆ ಎಂದರೆ ಸರಿ. ಸದರಿ ಸದರಿ ನಾಗಪ್ಪ ಮಲ್ಲಪ್ಪ

ರಂಗರೆಡ್ಡಿ ರವರಿಗೆ ಯಾವುದೇ ಗಂಡು ಸಂತಾನ ಇರಲಿಲ್ಲ ಎಂದರೆ ಸರಿ. ಸದರಿ ನಾಗಪ್ಪ ಮಲ್ಲಪ್ಪ ರಂಗರೆಡ್ಡಿ ರವರಿಗೆ ಕೇವಲ ಒಬ್ಬಳೇ ಮಗಳು ಇದ್ದಳು ಆಕೆಯ ಹೆಸರು ಕಮಲವ್ವ ಎಂದರೆ ಸರಿ. ಸದರಿ ನಾಗಪ್ಪ ಮಲ್ಲಪ್ಪ ರಂಗರೆಡ್ಡಿ ರವರ ಹೆಂಡತಿಯ ಹೆಸರು ರತ್ನಮ್ಮ ಎಂದರೆ ಸರಿ. ಸದರಿ ಕಮಲವ್ವ (ಕಮಲಮ್ಮ) ರವರ ಮದುವೆಯನ್ನು ನಾಗಪ್ಪ ಬಸಪ್ಪ ಸಣ್ಣಯಲ್ಲಪ್ಪನವರ ರವರೊಂದಿಗೆ ನೇರವೇರಿಸಿದ್ದಾರೆ ಎಂದರೆ ಸರಿ. ಸದರಿ ಮದುವೆಯನ್ನು ಸದರಿ ನಾಗಪ್ಪ ಮಲ್ಲಪ್ಪ ರಂಗರೆಡ್ಡಿ ರವರು ತನ್ನ ಹೆಂಡತಿ ರತ್ನಮ್ಮ ತೀರಿಕೊಂಡ ನಂತರ ನೇರವೇರಿಸಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ . ಸದರಿ ನಾಗಪ್ಪ ಮಲ್ಲಪ್ಪ ರಂಗರೆಡ್ಡಿ ರವರು ಸದರಿ ತನ್ನ ಒಬ್ಬಳೇ ಮಗಳಾದ ಕಮಲಮ್ಮಳ ಮದುವೆಯನ್ನು ಸದರಿ ನಾಗಪ್ಪ ಬಸಪ್ಪ ಸಣ್ಣಯಲ್ಲಪ್ಪನವರ ರವರೊಂದಿಗೆ ನೇರವೇರಿಸಿ ಆತನನ್ನು ತನ್ನ ಮನೆಯ ಅಳಿಯನೆಂದು ತನ್ನ ಮನೆಯಲ್ಲಿಯೇ ಇಟ್ಟುಕೊಂಡಿದ್ದರು ಎಂದರೆ ಸರಿ. ಸದರಿ ಕಮಲಮ್ಮ ನ ಗಂಡನಾದ ನಾಗಪ್ಪ ಬಸಪ್ಪ ಸಣ್ಣಯಲ್ಲಪ್ಪನವರ ರವರು ಸದರಿ ನಾಗಪ್ಪ ಮಲ್ಲಪ್ಪ ರಂಗರೆಡ್ಡಿ ರವರ ವಯಸ್ಸು ಆಗಿದ್ದ

ಕಾರಣಕ್ಕಾಗಿ ಮನೆತನದ ಮತ್ತು ಬ್ಯಾಂಕಿನ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಸದರಿ ನಾಗಪ್ಪ ಮಲ್ಲಪ್ಪ ರಂಗರೆಡ್ಡಿ ರವರು ಸದರಿ ಮೇಲೆ ಹೇಳಿದ ಕಾರಣಗಳಿಗಾಗಿ ಸದರಿ ಸರ್ವೇ ನಂ.67/1 ರ 6 ಎಕರೆ 12 ಗುಂಟೆ ಜಮೀನನ್ನು ಸದರಿ ನಾಗಪ್ಪ ಬಸಪ್ಪ ಸಣ್ಣಯಲ್ಲಪ್ಪನವರ ರವರ ಹೆಸರಿಗೆ ದಾಖಲು ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ನಾಗಪ್ಪ ರವರ ಹೆಸರು ಮುಷ್ಠೂರು ಗ್ರಾಮದ ಡ–ನಂ.1100 ರಲ್ಲಿಯೂ ಸಹ ದಾಖಲು ಆಗಿರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ನಾಗಪ್ಪ ಬಸಪ್ಪ ಸಣ್ಣಯಲ್ಲಪ್ಪನವರ ರವರ ಹೆಸರು ಸದರಿ ಆಸ್ತಿಗೆ ಸುಮಾರು 33 ವರ್ಷಗಳ ಹಿಂದೆಯೇ ದಾಖಲು ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ . ಸದರಿ ನಾಗಪ್ಪ ಬಸಪ್ಪ ಸಣ್ಣಯಲ್ಲಪ್ಪನವರ ರವರ ಮೊದಲನೇ ಹೆಂಡತಿ ಕಮಲಮ್ಮ ಎಂದರೆ ಸರಿ. ಸದರಿ ಸದರಿ ನಾಗಪ್ಪ ಬಸಪ್ಪ ಸಣ್ಣಯಲ್ಲಪ್ಪನವರ ರವರ ಎರಡನೇ ಹೆಂಡತಿ ಗಿರಿಜವ್ವ (3 ನೇ ಪ್ರತಿವಾದಿ) ಎಂದರೆ ಸರಿ. ಸದರಿ ಕಮಲಮ್ಮ 1989 ನೇ ಇಸವಿಯಲ್ಲಿ ಮರಣ ಹೊಂದಿದ್ದಾರೆ ಎಂದರೆ ಸರಿ. ಸದರಿ ಕಮಲಮ್ಮನ

ಮರಣದ ನಂತರ ಸದರಿ ನಾಗಪ್ಪ ಬಸಪ್ಪ ಸಣ್ಣಯಲ್ಲಪ್ಪನವರ ರವರು ಸದರಿ ಗಿರಿಜವ್ವಳನ್ನು ಮದುವೆಯಾಗಿದ್ದಾರೆ ಎಂದರೆ ಸರಿ. ಸದರಿ ನಾಗಪ್ಪ ಬಸಪ್ಪ ಸಣ್ಣಯಲ್ಲಪ್ಪನವರ ರವರ ಮೊದಲನೇ ಹೆಂಡತಿ ಕಮಲಮ್ಮ ರವರಿಗೆ ಕೇವಲ ಮೂರು ಹೆಣ್ಣುಮಕ್ಕಳು ಮಾತ್ರ ಇದ್ದಾರೆ ಎಂದರೆ ಸರಿ. ಸದರಿ ಕಮಲಮ್ಮಳಿಗೆ ಗಂಡು ಸಂತಾನ ಇರಲಿಲ್ಲ ಎಂದರೆ ಸರಿ. ಸದರಿ ಮೂರು ಜನ ಹೆಣ್ಣುಮಕ್ಕಳು ಎಂದರೆ 1) ರೇಣುಕಮ್ಮ (1 ನೇ ಪ್ರತಿವಾದಿ) , 2) ಮೈತ್ರಾ ಊರ್ಫ್ ರತ್ನವ್ವ (ವಾದಿ) ಮತ್ತು 3) ಶಿಲ್ಪಾ ಊರ್ಫ್ ಗಂಗವ್ವ (2 ನೇ ಪ್ರತಿವಾದಿ) ಆಗಿದ್ದಾರೆ ಎಂದರೆ ಸರಿ. ಸದರಿ ನಾಗಪ್ಪ ಬಸಪ್ಪ ಸಣ್ಣಯಲ್ಲಪ್ಪನವರ ರವರ ಎರಡನೇ ಹೆಂಡತಿ ಗಿರಿಜವ್ವಳಿಗೆ ಇಬ್ಬರು ಗಂಡುಮಕ್ಕಳು ಮಾತ್ರ ಇದ್ದಾರೆ ಎಂದರೆ ಸರಿ. ಸದರಿ ಗಿರಿಜವ್ವಳಿಗೆ ಯಾವುದೇ ಹೆಣ್ಣು ಸಂತಾನ ಇರುವುದಿಲ್ಲ ಎಂದರೆ ಸರಿ. ಸದರಿ ಇಬ್ಬರು ಗಂಡು ಮಕ್ಕಳೆಂದರೆ 1) ಯಶವಂತ (4 ನೇ ಪ್ರತಿವಾದಿ) ಮತ್ತು 2)ಕೇಶವರೆಡ್ಡಿ (5 ನೇ ಪ್ರತಿವಾದಿ) ಆಗಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನ ಮೂರು ಆಸ್ತಿಗಳು ಸದರಿ ಗಿರಿಜವ್ವ ಮತ್ತು ಆಕೆಯ ಇಬ್ಬರು

ಗಂಡು ಮಕ್ಕಳು (3 ರಿಂದ 5 ನೇ ಪ್ರತಿವಾದಿಗಳು) ರವರ ಹೆಸರಿನಲ್ಲಿವೆ ಎಂದರೆ ಸರಿ. ಸದರಿ 3 ರಿಂದ 5 ನೇ ಪ್ರತಿವಾದಿಗಳ ಹೆಸರುಗಳು ದಾವಾ ಸ್ವತ್ತಿಗೆ ದಾಖಲು ಆಗಿವೆ ಎನ್ನುವ ಕಾರಣಕ್ಕಾಗಿ ಸದರಿಯವರೇ ಸಾಗುವಳಿ ಮಾಡುತ್ತಾರೆ ಎಂದರೆ ಸರಿ. ದಾವಾ ಸ್ವತ್ತುಗಳು ಸದರಿ 3 ರಿಂದ 5 ನೇ ಪ್ರತಿವಾದಿಗಳ ಹೆಸರಿನಲ್ಲಿ ಇವೆ ಎನ್ನುವ ಕಾರಣಕ್ಕಾಗಿ ನಾನು ದಾವಾ ಸ್ವತ್ತಿನಲ್ಲಿ ಎಂದಿಗೂ ಸಾಗುವಳಿ ಮಾಡಿರುವುದಿಲ್ಲ ಮತ್ತು ಅದು ನನ್ನ ಸ್ವಾಧೀನ (ಕಬ್ಜಾ)ದಲ್ಲಿಯೂ ಸಹ ಇರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.
Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.